

# ಓದಿನ ಹಸಿವು ಹುಟ್ಟಿಸುವುದೇ ನನ್ನ ಆದ್ಯತೆ

**2023ರ ಯುಪಿಎಸ್‌ಸಿ ನಾಗರಿಕ ಸೇವಾ ಪರೀಕ್ಷೆಯಲ್ಲಿ 589ನೇ ರ‍್ಯಾಂಕ್ ಪಡೆದ ಸಿದ್ಧಲಿಂಗಪ್ಪ ಕೆ. ಪೂಜಾರ ಅವರ ಸಂದರ್ಶನ**

■ ರಾಘವೇಂದ್ರ ಕೆ.

◆ **ನಿಮ್ಮ ಪರಿಚಯ ಮತ್ತು ಹಿನ್ನೆಲೆಯನ್ನು ತಿಳಿಸಿ.**

ಧಾರವಾಡ ಜಿಲ್ಲೆಯ ಅಣ್ಣಿಗೇರಿ ನನ್ನೂರು. ಅಲ್ಲೇ ಹೈಸ್ಕೂಲ್ ಮುಗಿಸಿದೆ. ಬೆಂಗಳೂರಿನ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಚಿನ್ನದ ಪದಕದೊಂದಿಗೆ ಬಿ.ಇ. ಪದವಿ ಪಡೆದೆ. ಅಪ್ಪ (ಕರಿಸಿದ್ದಪ್ಪ ಪೂಜಾರ) ಕೆಎಸ್‌ಆರ್‌ಟಿಸಿಯಲ್ಲಿ ನಿರ್ವಾಹಕ. ಮೂರು ಎಕರೆ ಜಮೀನಿದೆ. ಅದನ್ನು ಅವ್ವ (ಶಾಂತವ್ವ) ನೋಡಿಕೊಳ್ಳುತ್ತಿದ್ದರು. ನಾನೂ ಹೊಲದಲ್ಲಿ ಕೆಲಸ ಮಾಡುತ್ತಲೇ ಬೆಳೆದೆ. ನನಗೆ ಇಬ್ಬರು ತಮ್ಮಂದಿರು. ಇಬ್ಬರೂ ಓದನ್ನು ಬಿಟ್ಟು ಕೃಷಿ ಮಾಡುತ್ತಿದ್ದಾರೆ. ಊಟಕ್ಕೆ ಸಮಸ್ಯೆ ಇರಲಿಲ್ಲ. ಬಡತನ ಯಾವತ್ತೂ ಸಮಸ್ಯೆ ಅನಿಸಿಲ್ಲ. ಕೊಟ್ಟಿದ್ದನ್ನು ತಿಂದು ಶಾಲೆ, ಆಟ, ಕೆಲಸವನ್ನು ಮಾಡುತ್ತಾ ಬೆಳೆದೆ. ಐಟಿ ಕಂಪನಿಯಲ್ಲಿ ಮೂರು ವರ್ಷ ಕೆಲಸ ಮಾಡಿದ ಮೇಲೆ ಯುಪಿಎಸ್‌ಸಿ ಬಗ್ಗೆ ಪೋಷಕರಿಗೆ ಕೇಳಿದೆ. ಹಣದ ಅಗತ್ಯ ತುಂಬ ಇತ್ತು. ಆದರೂ ಅಪ್ಪ ‘ನಿನ್ನ ತಮ್ಮಂದಿರಿಗೆ ಓದಿಸುವ ಪ್ರಯತ್ನ ಕೈಗೂಡಲಿಲ್ಲ. ನೀನು ಏನೋ ಮಾಡ್ತೀನಿ ಅಂತಿಯಾ, ಮಾಡು. ಸದ್ಯ ನಿನ್ನ ಸಂಬಳ ಕೈ ತಪ್ಪುತ್ತದೆ. ಮುಂದೆ ನನಗೆ ಪಿಂಚಣಿ ಬರ್ತದೆ, ಅದರಲ್ಲಿ ನಾವು ಜೀವನ ಮಾಡ್ತೀವಿ. ಯಶಸ್ಸು ಸಿಕ್ಕರೆ ನಸೀಬು ಬದಲಾಗುತ್ತೆ’ ಎಂದು ಭರವಸೆಯನ್ನು ತುಂಬಿದರು. ಅವ್ವ ‘ನೀನು ಏನಾದರೂ ಮಾಡಪ, ಚಂದ ಇರು, ಖುಷಿಯಾಗಿರು’ ಎಂದು ಹರಸಿದರು.

◆ **ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಾಗರಿಕ ಸೇವಾ ಪರೀಕ್ಷೆಯನ್ನು ಬರೆಯಬೇಕು ಎಂಬ ಸಂಕಲ್ಪ ಮಾಡಿದ್ದು ಏಕೆ?**

ನನ್ನ ಊರಲ್ಲಿ ಶಿಕ್ಷಣದ ಪ್ರಾಮುಖ್ಯತೆ ಗೊತ್ತಿಲ್ಲ. ಶಾಲೆ ಬಿಡುವ ಮಕ್ಕಳ ಪ್ರಮಾಣ ಹೆಚ್ಚಿದೆ. ಶ್ರಮ ಜೀವಿಗಳೇ ಹೆಚ್ಚಿದ್ದು, ತಮ್ಮ ಮಕ್ಕಳನ್ನು ಕೆಲಸಕ್ಕೆ ತೊಡಗಿಸಿಕೊಳ್ಳುತ್ತಾರೆ. ಶಿಕ್ಷಣದ ಬಗ್ಗೆ ಜಾಗೃತಿ ಸ್ವಲ್ಪ ಕಡಿಮೆ. ನಾನು ಅವರಿಗೆ ಮಾದರಿ ಆಗಬೇಕು. ನನ್ನನ್ನು ಗುರುತಿಸುವಂತೆ ಬೆಳೆದರೆ ಅವರಿಗೂ ಓದಬೇಕು ಅನ್ನಿಸೀತು. ಎಸ್‌ಎಸ್‌ಎಲ್‌ಸಿಯಲ್ಲಿ ಟಾಪರ್ ಆಗಿದ್ದಾಗ ಅದು ಊರಿನಲ್ಲಿ ಸಣ್ಣ ಸಂಚಲನ ತಂದಿತ್ತು. ಆದರದು ಪರಿಣಾಮಕಾರಿಯಾಗಿ ಉಳಿಯಲಿಲ್ಲ. ಈಗ ನಮ್ಮೂರಲ್ಲಿ ನನ್ನದೇ ಮಾತು. ‘ಸಾಕಷ್ಟು ಸಮಸ್ಯೆಗಳು ಇದ್ದರೂ ಯುಪಿಎಸ್‌ಸಿ ಪರೀಕ್ಷೆ ಪಾಸಾಗಿದ್ದಾನೆ. ನಾವೂ ಯಾಕೆ ಮಾಡಬಾರದು’ ಎನ್ನುವ ಛಲ ಅನೇಕರಲ್ಲಿ ಮೂಡಿದೆ. ಹೀಗೆ ಆಗಬೇಕು ಎಂದು ನಾನು ಅಂದುಕೊಂಡಿದ್ದೆ, ಅದು ನನಗೆ ಬೇಕಿತ್ತು.

◆ **ನಿಮ್ಮ ಓದು ಮತ್ತು ಪ್ರಯತ್ನ ಹೇಗಿತ್ತು?**

ಜನವರಿ, 2018ರಲ್ಲಿ ಕೆಲಸ ಬಿಟ್ಟೆ. ಬೆಂಗಳೂರಿನ ಒಂದು ಗ್ರಂಥಾಲಯದಲ್ಲಿ ಓದಲು ಶುರುಮಾಡಿದೆ. ಕೋಚಿಂಗ್‌ಗೆ ಹೋಗುವ ಆಸೆ ಇತ್ತು. ನನ್ನ ಬಳಿ ಹಣ ಹೆಚ್ಚಿರಲಿಲ್ಲ. ಇರುವ ದುಡ್ಡು ಖರ್ಚಾದರೆ ಮುಂದೆ ಕಷ್ಟ. ಯಶಸ್ಸು ಮೊದಲ ಪ್ರಯತ್ನದಲ್ಲೇ ಸಿಗುವ ಸಾಧ್ಯತೆ ಕಡಿಮೆ ಎಂದು ಕೋಚಿಂಗ್‌ಗೆ ಹೋಗಲಿಲ್ಲ. ಪೂರ್ವಭಾವಿ (ಪ್ರಿಲಿಮ್ಸ್) ಪರೀಕ್ಷೆಯನ್ನು ನಾಲ್ಕು ತಿಂಗಳು ಓದಿ ಬರೆದೆ. ಪಾಸ್ ಆಗಲಿಲ್ಲ. ಆದರೆ ಕಟ್‌ಆಫ್‌ಗೆ ಹತ್ತಿರ ಬಂದಿತ್ತು. ಮುಂದಿನ ಪ್ರಯತ್ನದಲ್ಲಿ ಮಾಡುತ್ತೇನೆ ಎನ್ನುವ ವಿಶ್ವಾಸ ಬಂತು. 2019ರಲ್ಲಿ ಮುಖ್ಯ ಪರೀಕ್ಷೆಯೂ ಯಶಸ್ವಿಯಾಗಿ ಸಂದರ್ಶನಕ್ಕೆ ಹೋದೆ. ಸ್ಕೋರ್ ಕಡಿಮೆ ಇದ್ದಿದ್ದರಿಂದ ಆಯ್ಕೆ ಆಗಲಿಲ್ಲ. ನಂತರ ಕೋವಿಡ್ ಅವಧಿಯಲ್ಲಿ ಎರಡು ವರ್ಷವೂ ಪ್ರಿಲಿಮ್ಸ್ ಕೂಡ ಆಗಲಿಲ್ಲ. ಆದರೆ, ಯುಪಿಎಸ್‌ಸಿ ನಡೆಸುವ ಸಿಆರ್‌ಪಿಎಫ್ (ಕೇಂದ್ರ ಮೀಸಲು ಪೊಲೀಸ್ ಪಡೆ) ಸೇವೆಗೆ ಆಯ್ಕೆಯಾಗಿದ್ದೆ. ಆಲ್ ಇಂಡಿಯಾದಲ್ಲಿ 80ನೇ ರ‍್ಯಾಂಕಿಂಗ್ ಪಡೆದು ಅಸಿಸ್ಟೆಂಟ್ ಕಮಾಂಡೆಂಟ್ ಆಗಿ ಕೆಲಸಕ್ಕೆ ಸೇರಿದೆ. ತರಬೇತಿ ಅವಧಿಯಲ್ಲಿ ಆರೋಗ್ಯದ ಸಮಸ್ಯೆ ಕಾಡಿತು. ಸ್ವಲ್ಪ ಸಮಯಾವಕಾಶ ತೆಗೆದುಕೊಂಡು ಹೊರಬಂದೆ. ಆ ಸಂದರ್ಭದಲ್ಲಿ ಮತ್ತೆ ಪರೀಕ್ಷೆ ಬರೆದೆ. 589 ರ‍್ಯಾಂಕ್ ಬಂದಿದೆ. ಒಬಿಸಿ ಮೀಸಲು ಸೌಲಭ್ಯವೂ ಇರುವುದರಿಂದ ಐಪಿಎಸ್ ಅಥವಾ ಐಆರ್‌ಎಸ್‌ನಲ್ಲಿ ಕೆಲಸ ಸಿಗುತ್ತದೆ.

◆ **ಐಪಿಎಸ್ ಅಧಿಕಾರಿ ಆದರೆ ನಿಮ್ಮ ಆದ್ಯತೆ ಏನಾಗುತ್ತದೆ?**

ಕೊಟ್ಟಿರುವ ಕೆಲಸವನ್ನು ನಿಷ್ಠೆ, ಶ್ರದ್ಧೆ ಮತ್ತು ಪ್ರಾಮಾಣಿಕವಾಗಿ ಮಾಡುವುದು ಪ್ರಾಥಮಿಕ ಆದ್ಯತೆ. ಕಾನೂನಾತ್ಮಕವಾಗಿ ನಡೆದುಕೊಳ್ಳುವುದು ಮುಖ್ಯ. ಈ ಸೇವೆ ಅದನ್ನೇ ಬಯಸುತ್ತದೆ. ಜನರಿಗೆ ಏನು ಬೇಕಾಗಿದೆಯೋ ಅದನ್ನೇ ಮಾಡಬೇಕು. ವೈಯಕ್ತಿಕವಾಗಿ ಹಳ್ಳಿಗಳಿಗೆ ಭೇಟಿ ನೀಡಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುತ್ತೇನೆ. ಯಾರಿಗೂ ಹಣ–ಊಟ ಕೊಡುವುದು ಮುಖ್ಯ ಅಲ್ಲ. ಶಿಕ್ಷಣ ಕೊಟ್ಟರೆ ಅವರ ಮನೆ, ಊರು ಉದ್ಧಾರ ಆಗುತ್ತದೆ. ಮೊದಲಿನಿಂದಲೂ ಅದೇ ನಂಬಿಕೆ ಇಟ್ಟುಕೊಂಡಿದ್ದೇನೆ. ಇವತ್ತು ಉಪವಾಸ ಇದ್ದರೂ ತೊಂದರೆ ಇಲ್ಲ. ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಟ್ಟರೆ ನಾಳೆ ನೂರು ಜನರ ಹಸಿವು ನೀಗಿಸುವ ಶಕ್ತಿ ಪಡೆಯುತ್ತಾರೆ ಎನ್ನುವುದನ್ನು ಪೋಷಕರಿಗೆ ಹೇಳಬೇಕು.

◆ **ಎಂಜಿನಿಯರಿಂಗ್ ಓದಿದ ನಿಮಗೆ ಕನ್ನಡ ಸಾಹಿತ್ಯದ ಪ್ರೀತಿ ಹುಟ್ಟಿದ್ದು ಹೇಗೆ?**

ಕನ್ನಡ ನನ್ನ ಮನೆ ಮಾತು. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಾಲ್ಯದಿಂದಲೂ ತೆರೆದುಕೊಂಡಿದ್ದೇನೆ. ಭಾಷೆಯ ಮೇಲಿನ ಹಿಡಿತ, ದುಂಡಾಗಿ ವೇಗವಾಗಿ ಬರೆಯುವ ಅಭ್ಯಾಸ. ಕನ್ನಡ ಸಾಹಿತ್ಯದ ಪಠ್ಯ ಮೂಡಿಸಿದ ವಿಶ್ವಾಸದಿಂದ ಐಚ್ಛಿಕ ವಿಷಯವಾಗಿ ಅದನ್ನೇ ಆಯ್ಕೆ ಮಾಡಿಕೊಂಡೆ. ಐಚ್ಛಿಕ ವಿಷಯದಲ್ಲಿ ಒಮ್ಮೆ ಓದಿದರೆ ಮುಂದಿನ ಪ್ರಯತ್ನಗಳಿಗೆ ಹೆಚ್ಚು ಓದುವ ಅಗತ್ಯ ಇರುವುದಿಲ್ಲ. ವಿಮರ್ಶಾತ್ಮಕವಾಗಿ ಬರೆಯುವ ಕೌಶಲ್ಯ ಹೆಚ್ಚುತ್ತದೆ ಎಂದು ಅದರಲ್ಲೇ ಮುಂದುವರಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರೊ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಮಾರ್ಗದರ್ಶನವನ್ನು ತೆಗೆದುಕೊಂಡೆ.

◆ **ಸಂದರ್ಶನ ಹೇಗಿತ್ತು?**

ಸಂದರ್ಶನಕ್ಕೆ ಹಾಜರಾಗಲು ವಿವರವಾದ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಅದರಲ್ಲಿ ಶಿಕ್ಷಣ, ಆಸಕ್ತಿ, ಪೋಷಕರ ವಿವರ ಉದ್ಯೋಗ ಸೇರಿ ವೈಯಕ್ತಿಕ ಮಾಹಿತಿಯನ್ನು ನೀಡಿರುತ್ತೇವೆ. ನನಗೆ ಸಿಆರ್‌ಪಿಎಫ್ ಸಂದರ್ಶನ ಸೇರಿ, ಇದು ಮೂರನೇ ಸಂದರ್ಶನ. ಚರಿತ್ರೆ, ಅರ್ಥಶಾಸ್ತ್ರ, ತಂತ್ರಜ್ಞಾನ ಸೇರಿ ಹಲವು ಆಯಾಮದಲ್ಲಿ ಪ್ರಶ್ನೆಗಳನ್ನು ಕೇಳಿದರು. ಈಗಾಗಲೇ ಪೊಲೀಸ್ ಪಡೆಯಲ್ಲಿ ಇದ್ದಿದ್ದರಿಂದ ‘ಸಹೋದ್ಯೋಗಿಗಳ ನಡುವೆ ಶೂಟೌಟ್ ಏಕೆ ಆಗುತ್ತವೆ’ ಎಂದರು. ಇದು ಸೇನೆಯ ಕೆಳಹಂತದಲ್ಲಿ ಸಾಮಾನ್ಯ. ಇದಕ್ಕೆ ಕಾರಣ ಕೆಲಸದ ವಾತಾವರಣ, ವರ್ಗೀಕರಣ, ಸಿಮೀತ ರಜೆ, ಸಣ್ಣ ಸಣ್ಣ ಮಾತಿಗೂ ಉದ್ವೇಗಕ್ಕೆ ತುತ್ತಾಗುವ ಮಾನಸಿಕ ಸ್ಥಿತಿ. ಕೈಯಲ್ಲಿ ಆಯುಧ ಇರುವುದರಿಂದ ಹಾಗೆ ಪ್ರೇರೇಪಿಸುತ್ತದೆ. ಮನೆಯಿಂದ ದೂರ ಇರುವುದರಿಂದ ಒಂಟಿತನ, ಹತಾಶೆ, ಹಣಕಾಸಿನ ಸಮಸ್ಯೆಗಳ ನಡುವೆ ಕೆಲಸದ ಒತ್ತಡವನ್ನು ಸಮತೋಲನ ಮಾಡಲು ಆಗುವುದಿಲ್ಲ ಹಾಗಾಗಿ ಆಗುತ್ತದೆ ಎಂದೆ. ನಂತರ ‘ದಕ್ಷಿಣ ಭಾರತದ ಸಿನಿಮಾ ನಟರು ಏಕೆ ಹೆಚ್ಚು ರಾಜಕಾರಣದತ್ತ ಒಲವು ತೋರಿಸುತ್ತಾರೆ’ ಎಂದು ಕೇಳಿದರು. ಅದರ ನಂತರ ಬೇರೆ ವಿಷಯಗಳು ಚರ್ಚೆಗೆ ಬಂದವು. ■